ಇಲಾಖೆ / ವಿಷಯ : DEPARTMENT / SUBJECT: ________

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡಪ್ರಭ                ದಿನಾಂಕ : DATE : 28/10/2019

# ಇಂದು ಹರ್ಯಾಣ ಸರ್ಕಾರ ರಚನೆ

## ಮುಖ್ಯಮಂತ್ರಿಯಾಗಿ ಮನೋಹರ್ ಲಾಲ್ ಖಟ್ಟರ್, ಡಿಸಿಎಂ ಆಗಿ ದುಷ್ಯಂತ್ ಶಪಥ

## ಸರ್ಕಾರ ರಚನೆಗೆ ಹಕ್ಕು ಮಂಡನೆ | ದೀಪಾವಳಿ ಹಬ್ಬದ ದಿನವೇ ಪ್ರಮಾಣವಚನ ಸ್ವೀಕಾರ

• **ಪಿಟಿಐ** ಚಂಡೀಗಢ

ವಿಧಾನಸಭೆ ಚುನಾವಣೆಯಲ್ಲಿ ಯಾರಿಗೂ ಬಹುಮತ ಸಿಗದ ಕಾರಣ ಅತಂತ್ರ ಸ್ಥಿತಿ ಎದುರಿಸುತ್ತಿದ್ದ ಹರ್ಯಾಣದಲ್ಲಿನ ಸರ್ಕಾರ ರಚನೆ ಹಗ್ಗಜಗ್ಗಾಟ ಅಂತ್ಯಗೊಂಡಿದ್ದು, ನರಕ ಚತುರ್ದಶಿ ದಿನವಾದ ಭಾನುವಾರ 2ನೇ ಬಾರಿ ಮುಖ್ಯಮಂತ್ರಿಯಾಗಿ ಬಿಜೆಪಿ ಮುಖಂಡ ಮನೋಹರಲಾಲ್ ಖಟ್ಟರ್ ಪ್ರಮಾಣವಚನ ಸ್ವೀಕರಿಸಲಿದ್ದಾರೆ. ಬಿಜೆಪಿಗೆ ಬೆಂಬಲ ನೀಡಿರುವ ಜನನಾಯಕ ಜನತಾ ಪಾರ್ಟಿ (ಜೆಜೆಪಿ) ಮುಖಂಡ ದುಷ್ಯಂತ್ ಚೌಟಾಲಾ ಅವರು ಉಪ ಮುಖ್ಯಮಂತ್ರಿಯಾಗಿ ಪದಗ್ರಹಣ ಮಾಡಲಿದ್ದಾರೆ.

ಬಿಜೆಪಿಯ 40 ಸದಸ್ಯರ ಬೆಂಬಲ ಹೊಂದಿರುವ ಖಟ್ಟರ್ ಅವರು ತಮಗೆ ಜೆಜೆಪಿಯ 10 ಶಾಸಕರು ಹಾಗೂ 7 ಪಕ್ಷೇತರರು ಸೇರಿ 57 ಶಾಸಕರ ಬೆಂಬಲವಿದೆ ಎಂದು ರಾಜ್ಯಪಾಲ ಸತ್ಯದೇವ್ ನಾರಾಯಣ ಆರ್ಯ ಅವರನ್ನು ಭೇಟಿ ಮಾಡಿ ಪತ್ರ ಸಲ್ಲಿಸಿದರು ಹಾಗೂ ಸರ್ಕಾರ ರಚನೆಗೆ ಹಕ್ಕು ಮಂಡಿಸಿದರು. ಚೌಟಾಲಾ ಮತ್ತು ಪಕ್ಷೇತರ ಶಾಸಕರು ಕೂಡ ರಾಜ್ಯಪಾಲರನ್ನು ಭೇಟಿ ಮಾಡಿ ಖಟ್ಟರ್ ನಾಯಕತ್ವದ ಸರ್ಕಾರಕ್ಕೆ ತಮ್ಮ ಬೆಂಬಲವಿದೆ ಎಂಬ ಪತ್ರ ನೀಡಿದರು.

ಬಳಿಕ ಆರ್ಯ ಅವರು ಖಟ್ಟರ್ ಅವರನ್ನು ಸರ್ಕಾರ ರಚನೆಗೆ ಆಹ್ವಾನಿಸಿದರು. ಸುದ್ದಿಗಾರರ ಜತೆ ಮಾತನಾಡಿ ಈ ಬಗ್ಗೆ ವಿವರ ನೀಡಿದ ಖಟ್ಟರ್, 'ದೀಪಾವಳಿ ದಿನವಾದ ಭಾನುವಾರ ಮಧ್ಯಾಹ್ನ 2.15ಕ್ಕೆ ನಾನು ಪ್ರಮಾಣವಚನ ಸ್ವೀಕರಿಸಲಿದ್ದೇನೆ. ದುಷ್ಯಂತ್ ಚೌಟಾಲಾ ಉಪಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಲಿದ್ದಾರೆ' ಎಂದು ಹೇಳಿದರು.

ಇದಕ್ಕೂ ಮುನ್ನ ಕಳೆದ ಅವಧಿಯ ತಮ್ಮ ಮುಖ್ಯಮಂತ್ರಿಗಿರಿಗೆ ಖಟ್ಟರ್ ಅವರು ರಾಜ್ಯಪಾಲರನ್ನು ಭೇಟಿ ಮಾಡಿ ರಾಜೀನಾಮೆ ಸಲ್ಲಿಸಿದರು. ಔಪಚಾರಿಕ ಶಾಸಕಾಂಗ ಸಭೆಯಲ್ಲಿ ಅವರನ್ನು ಬಿಜೆಪಿ ಶಾಸಕಾಂಗ ನಾಯಕ ಎಂದು ಶಾಸಕರು ಚುನಾಯಿಸಿದರು. ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ 40, ಕಾಂಗ್ರೆಸ್ 31, ಜೆಜೆಪಿ 10 ಸ್ಥಾನ ಪಡೆದಿತ್ತು. ವಿಧಾನಸಭೆ ಬಲ 90 ಆಗಿದ್ದು, ಬಹುಮತಕ್ಕೆ 46 ಸ್ಥಾನ ಬೇಕು. ಬಿಜೆಪಿಗೆ ಬಹುಮತಕ್ಕೆ 6 ಶಾಸಕರ ಕೊರತೆ ಇತ್ತು.



ರಾಜ್ಯಪಾಲರ ಬಳಿ ಬಿಜೆಪಿ ಮತ್ತು ಜೆಜೆಪಿ ನಾಯಕರಿಂದ ಹಕ್ಕು ಮಂಡನೆ.

## ಮಹಾರಾಷ್ಟ್ರದಲ್ಲಿ ಇನ್ನೂ ಅಧಿಕಾರದ ಹಗ್ಗಜಗ್ಗಾಟ

ಎರಡೂವರೆ ವರ್ಷ ಸಿಎಂ ಪಟ್ಟಕ್ಕೆ ಶಿವಸೇನೆ ಪಟ್ಟು

ಬಿಜೆಪಿ ಲಿಖಿತವಾಗಿ ಬರೆದುಕೊಡಲಿ: ಆಗ್ರಹ

### ಮುಖ್ಯಮಂತ್ರಿ ಹುದ್ದೆ ಬಿಡಲ್ಲ: ಫಡ್ನವೀಸ್

ಶಿವಸೇನೆಗೆ ಸಿಎಂ ಸ್ಥಾನ ನೀಡುವ ಸಾಧ್ಯತೆಯನ್ನು ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ತಿರಸ್ಕರಿಸಿದ್ದಾರೆ. ಮುಂದಿನ 5 ವರ್ಷ ಬಿಜೆಪಿ ನಾಯಕತ್ವದಲ್ಲಿ ಸ್ಥಿರ ಸರ್ಕಾರ ಕೊಡುತ್ತೇವೆ ಎಂದು ಹೇಳಿದ್ದಾರೆ.

ಮುಂಬೈ: ಮುಖ್ಯಮಂತ್ರಿ ಹುದ್ದೆಗಾಗಿ ಬಿಜೆಪಿ-ಶಿವಸೇನೆ ಮೈತ್ರಿಕೂಟದ ನಡುವೆ ನಡೆದಿರುವ ಸಂಘರ್ಷವು ರಾಜ್ಯದಲ್ಲಿ ನೂತನ ಸರ್ಕಾರ ರಚನೆಯನ್ನು ವಿಳಂಬ ಮಾಡುವ ಎಲ್ಲ ಸಾಧ್ಯತೆಗಳು ಗೋಚರಿಸುತ್ತಿವೆ. 'ಮುಖ್ಯಮಂತ್ರಿ ಹುದ್ದೆ 50:50 ಸೂತ್ರದ ಅನುಸಾರ ಬಿಜೆಪಿ-ಶಿವಸೇನೆ ಮಧ್ಯೆ ಹಂಚಿಕೆಯಾಗಬೇಕು. 5 ವರ್ಷದಲ್ಲಿ ಎರಡೂವರೆ ವರ್ಷ ಶಿವಸೇನೆಯವರಿಗೆ ಸಿಎಂ ಹುದ್ದೆ ನೀಡಬೇಕು. ಉಳಿದ 2.5 ವರ್ಷ ಬಿಜೆಪಿಗೆ ಹೋಗಬೇಕು. ಈ ಬಗ್ಗೆ ಬಿಜೆಪಿ ತನ್ನ ಲೆಟರ್‌ಹೆಡ್‌ನಲ್ಲಿ ಲಿಖಿತ ಭರವಸೆ ನೀಡಬೇಕು. ಆದಿತ್ಯ ಠಾಕ್ರೆ ಅವರನ್ನೇ ಹೊಸ ಸಿಎಂ ಆಗಿ ಘೋಷಿಸಬೇಕು' ಎಂದು ಶಿವಸೇನೆಯ ಉದ್ಧವ್ ಠಾಕ್ರೆ ಆಗ್ರಹಿಸಿದ್ದಾರೆ. ಇದಕ್ಕೆ ಬಿಜೆಪಿ ಮಣಿಯುವ ಲಕ್ಷಣ ಕಾಣುತ್ತಿಲ್ಲ.

## ವಿವಾದಿತ ಕಾಂಡಾ ಬೆಂಬಲ ತಿರಸ್ಕಾರ

ಚಂಡೀಗಢ: ಅತ್ಯಾಚಾರ ಆರೋಪಕ್ಕೆ ಗುರಿಯಾಗಿದ್ದ ವಿವಾದಾತ್ಮಕ ಶಾಸಕ ಗೋಪಾಲ್ ಕಾಂಡಾರಿಂದ ಬೆಂಬಲ ಪಡೆಯುವ ನಿರ್ಧಾರ ಭಾರೀ ವಿವಾದಕ್ಕೆ ಕಾರಣವಾಗುತ್ತಿದ್ದಂತೆ ಬಿಜೆಪಿ ಕಾಂಡಾ ಬೆಂಬಲ ತಿರಸ್ಕರಿಸಿದೆ. ಕಾಂಡಾ ಅವರ ಬೆಂಬಲವನ್ನು ನಾವು ಪಡೆಯುವುದಿಲ್ಲ ಎಂದು ಕೇಂದ್ರ ಸಚಿವ ರವಿಶಂಕರ ಪ್ರಸಾದ್ ತಿಳಿಸಿದ್ದಾರೆ.

## ದುಷ್ಯಂತ್ ಶಪಥ: ತಂದೆಗೆ ಪರೋಲ್

ನವದೆಹಲಿ: ಹರ್ಯಾಣ ಉಪಮುಖ್ಯಮಂತ್ರಿಯಾಗಿ ಭಾನುವಾರ ಜೆಜೆಪಿ ಪಕ್ಷದ ನಾಯಕ ದುಷ್ಯಂತ್ ಚೌಟಾಲಾ ಪ್ರಮಾಣವಚನ ಸ್ವೀಕರಿಸಲಿರುವುದನ್ನು ನೋಡಲು ಸದ್ಯ ಜೈಲಿನಲ್ಲಿರುವ ಅವರ ತಂದೆ ಅಜಯ್ ಚೌಟಾಲಾ ಎರಡು ವಾರ ಪರೋಲ್ ಪಡೆದಿದ್ದಾರೆ. ಶಿಕ್ಷಕರ ನೇಮಕಾತಿ ಹಗರಣದಲ್ಲಿ ಮಾಜಿ ಸಿಎಂ ಓಂ ಪ್ರಕಾಶ್ ಚೌಟಾಲಾ ಜತೆ ಅಜಯ್ ಜೈಲು ಶಿಕ್ಷೆ ಅನುಭವಿಸುತ್ತಿದ್ದಾರೆ.

## 6,877 ಮತಗಳಿಂದ ಸ್ಪಷ್ಟ ಬಹುಮತ ನಷ್ಟ

ನವದೆಹಲಿ: ಹರ್ಯಾಣ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ 6,877 ಮತ ಎದುರಾಳಿಗಳಿಂದ ಕಸಿದುಕೊಂಡಿದ್ದರೆ ಸ್ಪಷ್ಟ ಬಹುಮತ ಪಡೆಯುತ್ತಿತ್ತು ಎಂಬ ಲೆಕ್ಕಾಚಾರ ವಿಶ್ಲೇಷಕರದ್ದು. ಬಿಜೆಪಿ 6 ಸ್ಥಾನಗಳಲ್ಲಿ ಕಾಂಗ್ರೆಸ್ ಎದುರು ಕೂದಲೆಳೆ ಅಂತರದಲ್ಲಿ ಸೋತಿದೆ. ಈ ಆರೂ ಕ್ಷೇತ್ರಗಳಲ್ಲಿ ಬಿದ್ದ ಎಲ್ಲ ಮತಗಳನ್ನು ಸೇರಿಸಿದರೆ ಕಾಂಗ್ರೆಸ್‌ಗೆ ಬಿಜೆಪಿಗಿಂತ ಕೇವಲ 13,745 ಹೆಚ್ಚು ಮತ ಬಂದಿವೆ. 13,745 ಮತಗಳ ಪೈಕಿ ಬಿಜೆಪಿ, 6,877 ಮತಗಳನ್ನು ಪಡೆಯಬೇಕಿತ್ತು.

4